# ಕಾಮ ಕಾಂಚನ ತ್ಯಾಗ

ಜಿ.ಎಸ್. ಜಯದೇವ

ತ್ಯಾಗದ ಹಿನ್ನೆಲೆಯಿಲ್ಲದೆ ಧರ್ಮಕ್ಕೆ ಯಾವ ಅರ್ಥವೂ ಇಲ್ಲ—ಅದೊಂದು ಧರ್ಮ ವಿಕೃತಿ ಅಷ್ಟೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ಕಾಮಕಾಂಚನ ತ್ಯಾಗಕ್ಕೆ ಹೆಚ್ಚು ಒತ್ತನ್ನು ನೀಡಿದರು. ಇದೇ ಭಾವನೆಯನ್ನು ಪ್ರತಿಬಿಂಬಿಸುವ ಶ್ರೀ ಬಸವಣ್ಣನವರ ಒಂದು ವಚನವನ್ನು ತೆಗೆದುಕೊಂಡು ವಿಶ್ಲೇಷಣೆ ನಡೆಸಿದ್ದಾರೆ ಶ್ರೀ ಜಯದೇವ ಅವರು. ಇವರು 'ದೀನಬಂಧು' 'ಶಕ್ತಿಧಾಮ' ಮುಂತಾದ ಸಂಸ್ಥೆಗಳ ಮೂಲಕ ಸಮಾಜಸೇವಾ ಕಾರ್ಯಕ್ಕೆ ತಮ್ಮ ಇಡೀ ಜೀವನವನ್ನು ಅರ್ಪಿಸಿಕೊಂಡಿರುವರು.

ಕಾಮವ ತೊರೆದಾತ ಹೇಮವ ಜರಿದಾತ
ಭಾನುವಿನ ಉದಯಕ್ಕೆ ಒಳಗಾಗದ ಶರಣನು
ಆಗಲೂ ನಿಮ್ಮನೆ ಮಾಣದೆ ನೆನೆವರ
ಮನೆಯಲು ಶ್ವಾನನಾಗಿರಿಸು
ಮಹಾದಾನಿ, ಕೂಡಲ ಸಂಗಮದೇವ.

ಮನುಷ್ಯ ಪ್ರಜ್ಞಾವಂತ ಜೀವಿಯಾದಾಗಿನಿಂದಲೂ ಬಹುಶಃ ಅವನಿಗೆ ಅರಿವಿಲ್ಲದಂತೆ ತನ್ನೊಳಗಿನ ಪ್ರಲೋಭನೆಗಳ ಮೇಲೆ ವಿಜಯ ಸಾಧಿಸಬೇಕೆಂಬ ಒಂದು ಸಮಾನಾಂತರ ಆಸಕ್ತಿ ಪ್ರವಹಿಸುತ್ತ ಬಂದಿದೆ. ಕಾಮಕಾಂಚನದ ಆಸಕ್ತಿ ಎಲ್ಲೆಲ್ಲೂ ಇದೆ. ಈ ಆಸಕ್ತಿ ಎಷ್ಟು ಪ್ರಬಲವಾಗಿ ನಮ್ಮ ನರನಾಡಿಗಳಲ್ಲಿ ಪ್ರವಹಿಸುತ್ತಿದೆಯೋ ಅಷ್ಟೇ ಪ್ರಬಲವಾಗಿ ಇದರ ವಿರುದ್ಧದ ಆಸಕ್ತಿ ಎಂದರೆ ಇವುಗಳ ತ್ಯಾಗದ ಆಸಕ್ತಿಯೂ ಮನುಷ್ಯ ಪ್ರಜ್ಞಾವಂತನಾದಾಗಿನಿಂದಲೂ ಅವನಲ್ಲಿ ಪ್ರವಹಿಸುತ್ತಿದೆ. ಇದು ಪ್ರಕೃತಿಗೆ ವಿರೋಧವಾಗಿ ಚಲಿಸುವ ಆಸಕ್ತಿ. ಹಾಗೆ ನೋಡಿದರೆ ಜೀವವಸ್ತುಗಳೆಲ್ಲವೂ ಸರಳ ಭೌತಿಕ ನಿಯಮಗಳಿಗೆ ತೀವ್ರ ಅವಿಧೇಯತೆಯನ್ನು ತೋರುತ್ತವೆ. ಉದಾಹರಣೆಗೆ ಪ್ರಪಂಚದ ಭೌತಿಕ ವಿದ್ಯಮಾನಗಳೆಲ್ಲ ವ್ಯವಸ್ಥೆಯಿಂದ ಅವ್ಯವಸ್ಥೆಯೆಡೆಗೆ (*order to chaos*) ಸರಿಯುತ್ತಿದ್ದರೆ, ಜೀವ ಅವ್ಯವಸ್ಥಿತ ಪರಿಕರಗಳನ್ನು ತನ್ನ ಪರಿಧಿಗೆ ಸೆಳೆದುಕೊಂಡು ವ್ಯವಸ್ಥೆಗೆ ಒಳಪಡಿಸುತ್ತದೆ. ನಿರ್ಜೀವ ವಸ್ತುಗಳಿಗೆ ಚಾಚೂ ತಪ್ಪದೆ ಅನ್ವಯವಾಗುವ ಥರ್ಮೋಡೈನಾಮಿಕ್ಸ್ ನಿಯಮಗಳನ್ನು ಸಜೀವಿಗಳು ಸಾರಾಸಗಟಾಗಿ ತಿರಸ್ಕರಿಸುತ್ತವೆ. ಶ್ರೋಡಿಂಜರ್ ಎಂಬ ವಿಜ್ಞಾನಿ ಸಜೀವ ವಸ್ತುಗಳಿಗೆ ಥರ್ಮೋಡೈನಾಮಿಕ್ಸ್ ನಿಯಮವನ್ನು ಅನ್ವಯಿಸುವುದು ಹೇಗೆ ಎಂಬ ಬಗ್ಗೆ ಚಿಂತಿಸಿದ. ಈ ವಿಷಯವನ್ನು ಸ್ವಾಮಿ ವಿವೇಕಾನಂದರು ಗಮನಿಸುತ್ತಾರೆ. ಜೀವಿಯ ಸ್ವಭಾವವೇ ಪ್ರಕೃತಿಗೆ ವಿರುದ್ಧದ ಚಲನೆ ಎಂದು ಅವರು ಹೇಳುತ್ತಾರೆ.

ಕಾಮಕಾಂಚನಾಸಕ್ತಿಯನ್ನು ತೊರೆದವನು ಸಾಕಷ್ಟು ಆಂತರಿಕ ಶಿಸ್ತಿಗೆ ತನ್ನನ್ನು ತಾನೇ ಅಳವಡಿಸಿಕೊಂಡಿರುತ್ತಾನೆ. ಆ ಶಿಸ್ತಿಗೆ ಒಳಪಡುವುದೇ ಸಾಧನೆ. ಈ ಸ್ವಾಭಾವಿಕ ಹುಟ್ಟರಿವುಗಳನ್ನು ಅದರಲ್ಲೂ ಕಾಮವನ್ನು ಏಕೆ ನಿಗ್ರಹಿಸಬೇಕು ಎಂಬ ಪ್ರಶ್ನೆ ಸಹಜವಾಗಿ ಬರುವುದು. ಎಷ್ಟು ನಿಗ್ರಹಿಸಬೇಕು ಎಂಬ ಪ್ರಶ್ನೆಯು ಸಂಸಾರದಲ್ಲಿ ನೆಲೆ ನಿಂತವನಿಗೆ ಬರಬಹುದಾದ ಪ್ರಶ್ನೆ. ಬಸವಣ್ಣನವರು ಕಾಮಕಾಂಚನ ತ್ಯಾಗ ಮಾಡಿದವನ ಮನೆಯ ಶ್ವಾನನಾಗಿರಲು ಬಯಸುತ್ತಾರೆ. ಎಂದರೆ ಕಾಮ-ಹೇಮಗಳನ್ನು ತೊರೆದವನು ಅತ್ಯಂತ ಪರಿಶುದ್ಧ ವ್ಯಕ್ತಿ, ಕಾಲವನ್ನು ಮೀರಿದವನಾಗುತ್ತಾನೆ ಎನ್ನುತ್ತಾರೆ. ಕಾಮವನ್ನು ಮೀರಿ ನಿಲ್ಲುವ ಪ್ರಕ್ರಿಯೆಯಲ್ಲಿ ಮನುಷ್ಯನಿಗೆ ಆಗಬಹುದಾದ ಲಾಭವಾದರೂ ಏನು? ಬಹಳಷ್ಟು ಜನ ಇದಕ್ಕೆ ಉತ್ತರಿಸುವ ಗೊಡವೆಗೆ ಹೋಗುವುದಿಲ್ಲ.

---

**ಪವಿತ್ರದೇಹದೊಳಗೆ ಇರುವ ಪರಿಶುದ್ಧ ಮನಸ್ಸು ವಿವೇಕ ಮತ್ತು ಸ್ವಾತಂತ್ರ್ಯಗಳ ಉಗಮಸ್ಥಾನ**

ಜೆರೆಮಿ ಟಾಯ್ಲರ್

---

ಕಾಮ ಒಂದು ಬಗೆಯ ತೀವ್ರ ಆಂತರಿಕ ಅವಲಂಬನೆಯನ್ನುಂಟು ಮಾಡುತ್ತದೆ. ಅದರ ಸೆಳವು ಚಿತ್ರವಿಚಿತ್ರಗತಿಗೆ ದಾರಿ ಮಾಡಿಕೊಟ್ಟು ನಮ್ಮ ವಿವೇಕ ಹರಣವಾಗಿಬಿಡುವ ಸಾಧ್ಯತೆ ಇದೆ. ಏಕೆಂದರೆ ಕಾಮದ ಬೇರುಗಳು ವೈಚಾರಿಕತೆಗೆ ದಕ್ಕದ ಆಳವಾದ ಹುಟ್ಟರಿವಿನ ಸ್ತರದಲ್ಲಿ ಅಡಗಿ ಕೂತಿದೆ. ಗರತಿಯೊಬ್ಬಳು ದಾರಿತಪ್ಪಿದ ಹೆಣ್ಣಿನ ಬಗ್ಗೆ ಅನವಶ್ಯಕ ಕುತೂಹಲಭರಿತಳಾಗಿ ಶೀಲವನ್ನು, ನೀತಿಯನ್ನು ಆಧಾರವಾಗಿಟ್ಟುಕೊಂಡು ಅವಹೇಳನ ಮಾಡುವಾಗ ಸಾಕಷ್ಟು ಪ್ರಮಾಣದ ಅಸೂಯೆಯೂ ಅದರಲ್ಲಿ ಬೆರೆತಿರುತ್ತದೆ. ಶೀಲಕ್ಕೆ ಕಟ್ಟು ಬಿದ್ದು ನಾನು ಅನುಭವಿಸಲಾರದ್ದನ್ನು ಆಕೆ ಸುಲಭವಾಗಿ ಅನುಭವಿಸಿಬಿಟ್ಟಳಲ್ಲ ಎಂಬ ಖೇದ ಅಸೂಯೆಗಳು ಈ ಬಗೆಯ ನೀತಿಬೋಧನೆಯ ನೆಲೆಯಾಗಿರಲು ಸಾಧ್ಯ.

ಜಾರೆಯರ ಬಗ್ಗೆ ಸಾಮಾನ್ಯವಾಗಿ ಮಾಡಲ್ಪಡುವ ಆಕ್ಷೇಪಣೆಗಳ ಮೂಲ ಸೆಲೆಯನ್ನು ಗಮನಿಸಿದಾಗ ನಮಗೆ ತಿಳಿಯುವುದು ಅದು ಶೀಲದ ನಿಲುವಿಗೆ ಅಥವಾ ನೀತಿಗೆ ಸಂಬಂಧಿಸಿದ್ದಲ್ಲವೇ ಅಲ್ಲ ಎಂಬುದು. ಬದಲಾಗಿ ತಮಗೆ ಸಿಗದಿದ್ದನ್ನು ಇನ್ನೊಬ್ಬರು ಪಡೆದುಕೊಂಡುಬಿಟ್ಟರಲ್ಲ ಎಂಬ ಅಸೂಯೆ ಈ ನೀತಿಯ ಮುಖವಾಡ ತೊಟ್ಟು ಬರುತ್ತದೆ. ನಮಗೆ ಸಿಗದಿದ್ದನ್ನು ನೀನೇಕೆ ಪಡೆದುಕೊಂಡೆ

ಎಂದು ಈ ವಿಷಯದಲ್ಲಿ ನೇರವಾಗಿ ಯಾರೂ ಕೇಳಲು ಸಾಧ್ಯವಿಲ್ಲ. ಆಗ ಅಸೂಯೆಯಿಂದ ಹುಟ್ಟಿದ ಆಕ್ರೋಶವನ್ನು ವ್ಯಕ್ತಪಡಿಸಲು ಶೀಲದ ನೀತಿಯ ಆಧಾರ ಬೇಕಾಗುತ್ತದೆ. ಬಹುಪಾಲು ನೀತಿ ಶೀಲಗಳ ಪ್ರತಿಪಾದನೆಯ ಸ್ಫೂರ್ತಿಯ ಅಂತರಂಗದಲ್ಲಿ ಅಡಗಿರುವುದು ಅಸೂಯೆ ಯಾಗಿರುತ್ತದೆ.

ನಿಜವಾದ ನಿರ್ಲಿಪ್ತತೆಯಿಂದ ರಕ್ತಗತವಾಗಿರುವ ಸಹಜವಾದ ಶೀಲ ತಪ್ಪಿತಸ್ಥರಲ್ಲಿ ಆಕ್ರೋಶಗೊಳ್ಳುವುದಿಲ್ಲ. ಶಿಕ್ಷೆಯ ಬಗ್ಗೆ ಉತ್ಸಾಹ ತೋರುವುದಿಲ್ಲ. ಬದಲಾಗಿ ದಾರಿ ತಪ್ಪಿದವರಲ್ಲಿ ಮತ್ತಷ್ಟು ಅನುಕಂಪವನ್ನು ತೋರುತ್ತದೆ. ಏಕೆಂದರೆ ಸಹಜವಾಗಿ ಹಣ್ಣಾದ ಶೀಲ ಕಾಯಿಯ ಹಂತವನ್ನು ದಾಟಿ ಬಂದಿದೆ. ಕಾಯಾಗಿದ್ದದ್ದು ಹಣ್ಣಾಗೇ ಆಗುತ್ತದೆಂಬ ಸತ್ಯ ಗೊತ್ತಿದೆ. ಆದ್ದರಿಂದ ಸಹಜಶೀಲ ಎಂದಿಗೂ ನೀತಿಸಂಹಿತೆಗಳನ್ನು ಅಥವಾ ದಂಡಸಂಹಿತೆಗಳನ್ನು ಸೃಷ್ಟಿಸುವುದಿಲ್ಲ. ಅದು ತನ್ನ ಇರುವಿಕೆಯಿಂದಲೇ ಇತರರ ಸ್ಥಿತಿಯನ್ನು ಉತ್ತಮಗೊಳಿಸುತ್ತದೆ.



ಶ್ರೀರಾಮಕೃಷ್ಣ ಪರಮಹಂಸರು ಈ ಹೊಸಯುಗದಲ್ಲಿ ಮಾನಸಿಕ ಪ್ರವೃತ್ತಿಗಳಿಗೆ ಮುಖ್ಯವಾದ ಮಾರ್ಗದರ್ಶನವನ್ನು ನೀಡಿದರು. ಅದೇ ಕಾಮ-ಕಾಂಚನ ತ್ಯಾಗ.

ಶ್ರೀರಾಮಕೃಷ್ಣ ಪರಮಹಂಸರು ಈ ಹೊಸಯುಗದಲ್ಲಿ ಮಾನಸಿಕ ಪ್ರವೃತ್ತಿಗಳಿಗೆ ಮುಖ್ಯವಾದ ಮಾರ್ಗದರ್ಶನವನ್ನು ನೀಡಿದರು. ಅದೇ ಕಾಮ-ಕಾಂಚನ ತ್ಯಾಗ. ಈ ಹೊಸಯುಗವನ್ನು ಕಲಿಯುಗ ಎನ್ನುತ್ತಾರೆ. ಅದಕ್ಕಿಂತಲೂ ಇದನ್ನು ಪ್ರಲೋಭನ ಯುಗ ಎಂದರೆ ಮೇಲು. ಮನುಷ್ಯನ ವೈಜ್ಞಾನಿಕ ಮನಸ್ಸು ಮಿತಿಮೀರಿದ ಬೆಳವಣಿಗೆಯನ್ನು ಪಡೆದು ಅದ್ಭುತ ತಾಂತ್ರಿಕತೆಯನ್ನು ಸಾಧಿಸಿತು. ಆದರೆ ಅಷ್ಟೇ ಪ್ರಮಾಣದ ವಿವೇಕವನ್ನು ಗಳಿಸಲಿಲ್ಲ. ಹಾಗಾಗಿ ತಾಂತ್ರಿಕತೆಗಳು ತಂದೊಡ್ಡುವ ಹಾನಿಕಾರಕ ಪ್ರಲೋಭನೆಗಳನ್ನು ನಿಗ್ರಹಿಸುವಷ್ಟು ವಿವೇಕಶಕ್ತಿ ಇಲ್ಲದೆ, ಇದ್ದ ಅಲ್ಪ ಸ್ವಲ್ಪ ವಿವೇಕವನ್ನು ಕಳೆದುಕೊಂಡು ಒಂದು ಬಗೆಯ ಮಂಗಚೇಷ್ಟೆಯಲ್ಲಿ ಮುಳುಗಿ ಕೂತಿದೆ. ತಾಂತ್ರಿಕತೆಯ ಸಾಧನೆಯಲ್ಲಿ ಸುಲಭವಾದ ಅದ್ಭುತ ಪ್ರಗತಿ ಸಾಧ್ಯ. ಏಕೆಂದರೆ ಸಾವಿರಾರು ವರ್ಷಗಳಿಂದ ಶೇಖರಣೆಗೊಂಡ ವೈಜ್ಞಾನಿಕ ಅನುಭವ ಒಂದೇ ಬಾರಿಗೆ ೨೦ನೇ ಶತಮಾನದಲ್ಲಿ ಫಲಕೊಡಲು ಪ್ರಾರಂಭಿಸಿತು.

ಮನುಷ್ಯ ಸಾಧಿಸಿದ ತಾಂತ್ರಿಕ ಪ್ರಗತಿಗಳೆಲ್ಲ ಕಲಿಯುವಿಕೆಯ ಪ್ರಕ್ರಿಯೆಗೆ ಲಭಿಸುವ, ಸಂತತಿಯಿಂದ ಸಂತತಿಗೆ ವರ್ಗಾಯಿಸಬಲ್ಲ ವಿವರಗಳು. ಇವು ಮನುಷ್ಯನ ಮೆದುಳಿನ ಹೊರಭಾಗದಲ್ಲಿ ಮಾತ್ರ ಶೇಖರಣೆಯಾಗಿರುವಂತಹವು. ಇವು ನಮ್ಮ ಮನಸ್ಸಿನ ಆಂತರಿಕ ಪ್ರವೃತ್ತಿಯ ಮೇಲೆ ಯಾವ ಪರಿಣಾಮವನ್ನೂ ಬೀರಲಾರವು. ಉದಾಹರಣೆಗೆ ಕಾಮದ ಅಥವಾ ಅಸೂಯೆಯ ಅಥವಾ ಕ್ರೋಧದ ಮೇಲೆ ಯಾವ ಮೂಲಭೂತ ಪ್ರಭಾವವನ್ನೂ ಬೀರಲಾರವು. ಈ ಪ್ರವೃತ್ತಿಗಳು ಕಲಿಕೆಯ ಸ್ತರವನ್ನು ಮೀರಿದ ಆಳವಾದ ಮೆದುಳಿನ ಸ್ತರಗಳಲ್ಲಿ ಶೇಖರವಾಗಿವೆ. ಈ ಪ್ರವೃತ್ತಿಗಳು ಅಥವಾ ಹುಟ್ಟರಿವು ಗಳನ್ನು ಪ್ರಾಣಿಗಳಲ್ಲೂ ಕಾಣುತ್ತೇವೆ. ಈ ಪ್ರವೃತ್ತಿಗಳು ಮೆದುಳಿನ ನರ ಮಂಡಲದ ವಿಶಿಷ್ಟ ವಿನ್ಯಾಸರೂಪದಲ್ಲಿ ಪ್ರಾಣಿಗಳಲ್ಲೂ ಮನುಷ್ಯನಲ್ಲೂ ಇರುತ್ತವೆ. ವಿಕಾಸಗೊಂಡಾಗಿನಿಂದಲೂ ಮನುಷ್ಯ ತನ್ನ ಪೂರ್ವಜರಿಂದ ಇದನ್ನು ಪಡೆದುಕೊಂಡಿದ್ದಾನೆ. ಹೀಗೆ ಈ ಪ್ರವೃತ್ತಿಗಳ ಮೂಲವನ್ನು ಹುಡುಕುತ್ತಾ ಹೋದರೆ ಅತ್ಯಂತ ಕೆಳವರ್ಗದ ಪ್ರಾಣಿಗಳಿಂದಲೂ ಈ ವಿಶಿಷ್ಟ ನರಮಂಡಲದ ವಿನ್ಯಾಸ ನಿರಂತರವಾಗಿ ವರ್ಗಾವಣೆಗೊಳ್ಳುತ್ತಾ ಕಡೆಗೆ ಮನುಷ್ಯನ ಮೆದುಳನ್ನು ತಲುಪಿದೆ ಎಂದು ತಿಳಿದು ಬರುತ್ತದೆ. ಆದ್ದರಿಂದ ಈ ಪ್ರವೃತ್ತಿಗಳಿಗೆ ಅನೇಕ ಕೋಟಿ ವರ್ಷಗಳ ಇತಿಹಾಸವಿದೆ. ಡೈನೋಸರ್‌ಗಳು ೨೦೦ ಕೋಟಿ ವರ್ಷಗಳ ಹಿಂದೆ ಇದ್ದ ಪ್ರಾಣಿಗಳು. ಈ ಪ್ರಾಣಿಗಳ ನರಮಂಡಲಕ್ಕೂ ಮನುಷ್ಯನ ನರಮಂಡಲಕ್ಕೂ ವ್ಯತ್ಯಾಸವಿದೆ ಎಂಬುದು ಖಚಿತವಾದರೂ ಕೆಲವು ಅಂಶಗಳಲ್ಲಿ ಸಾಮ್ಯವಿದ್ದೇ ಇದೆ. ಆ ಸಾಮ್ಯವನ್ನು ನಾವು ಗುರುತಿಸುವ ಬಗೆ ಹೇಗೆ ಎಂದು ಕೇಳಿದರೆ ಅದು ನಮ್ಮ ಪ್ರವೃತ್ತಿಗಳಲ್ಲಿ ಕಾಣಬರುವ ಸಾಮ್ಯ. ಕಾಮ ಕ್ರೋಧ, ಮದ,ಮತ್ಸರ, ಇವೆಲ್ಲವೂ ಡೈನೋಸರ್‌ಗಳಲ್ಲಿದ್ದ ಹಾಗೆಯೇ ನಮ್ಮಲ್ಲೂ ಇವೆ.

ಆದರೆ ಮನುಷ್ಯನಲ್ಲಿ ಅದರ ಅಭಿವ್ಯಕ್ತಿ ಮೆದುಳಿನ ವಿಚಾರದ ಸ್ತರದಿಂದ ಹಾದು ವ್ಯಕ್ತವಾಗಬೇಕಾಗಿರುವುದರಿಂದ ಮಾರ್ಪಾಟಾಗಿರುತ್ತದೆ. ವೈಚಾರಿಕ ನಿಲುವಿಗೆ ಕಾಮಕ್ರೋಧಗಳು ಅವೈಚಾರಿಕವಾಗಿ ಕಂಡಾಗ ಪ್ರತಿರೋಧಗಳನ್ನು ನಾವು ಸೃಷ್ಟಿಸುತ್ತೇವೆ. ಆದರೆ ಕಾಮ ಕ್ರೋಧಗಳ ಪ್ರವೃತ್ತಿಗಳು ಎಷ್ಟು ಪ್ರಬಲವಾಗಿವೆ ಎಂದರೆ ಅವು ನಮ್ಮ ವಿಚಾರದ ಧಾಟಿಯನ್ನು ನಮ್ಮ ಆತ್ಮಸಾಕ್ಷಿಗೆ ಮೀರಿ ಬದಲಿಸಬಲ್ಲವು. ವಿಚಾರದಿಂದ ಸಾಧಿಸಿದ ವಿವೇಕವನ್ನು ನಷ್ಟಗೊಳಿಸಬಲ್ಲವು. ಪ್ರವೃತ್ತಿ-ಪ್ರತಿರೋಧಗಳ ಘರ್ಷಣೆ ಅನೇಕ ಮಾನಸಿಕ ಖಾಯಿಲೆಗಳಿಗೆ ಕಾರಣವಾಗಬಹುದು. ಹೀಗೆ ಪ್ರಾಣಿವರ್ಗದಿಂದ ಪ್ರವಹಿಸಿ ಬಂದ ಪ್ರವೃತ್ತಿಗಳಲ್ಲಿ ಕಾಮವೇ ಬಹಳ ಪ್ರಬಲವಾದದ್ದು. ಆದ್ದರಿಂದಲೇ ನಮ್ಮ ದೇಶದ ಋಷಿಗಳೆಲ್ಲ ಕಾಮದ ಪ್ರಭಾವವನ್ನು ಗುರುತಿಸಿದರು. ಇದರ ಪ್ರಭಾವ ನಮ್ಮ ವಿವೇಕವನ್ನು ನಮ್ಮ ವೈಚಾರಿಕ ನಿಲುವನ್ನು ವಿಕೃತಗೊಳಿಸಬಲ್ಲದಾದರೆ ಅದನ್ನು ಮೀರಿನಿಲ್ಲುವ ಪ್ರಯತ್ನವನ್ನೇಕೆ ಮಾಡಬಾರದು ಎಂದು ಪ್ರಶ್ನಿಸಿದರು. ಈ ಪ್ರಯತ್ನವೇ ಪ್ರಪಂಚದ ಎಲ್ಲ ಧರ್ಮಗಳ ಮೂಲ. ಆದ್ದರಿಂದಲೆ ಎಲ್ಲ ಧರ್ಮಗಳು ಸಂಯಮವನ್ನು ಬೋಧಿಸುತ್ತವೆ.

> ನಮ್ಮಲ್ಲಿ ವಿಜ್ಞಾನ ಬಲ್ಲವರು ಅನೇಕರಿದ್ದಾರೆ. ಆದರೆ ದೇವತಾಪುರುಷರು ಅತ್ಯಂತ ಕಡಮೆ. ನಾವು ಪರಮಾಣುವಿನ ರಹಸ್ಯವನ್ನು ಗ್ರಹಿಸಿದೆವು ಮತ್ತು ಪರ್ವತೋಪದೇಶವನ್ನು ತಿರಸ್ಕರಿಸಿದೆವು. ಪ್ರಪಂಚವು ಪ್ರಚಂಡ ಬುದ್ಧಿಶಕ್ತಿಯನ್ನು ಸಾಧಿಸಿತು, ಆದರೆ ವಿವೇಕವನ್ನು ಕಳೆದುಕೊಂಡಿತು; ಅಪಾರ ಶಕ್ತಿಯನ್ನು ಪಡೆಯಿತು, ಆದರೆ ಅಂತಃಸಾಕ್ಷಿ ಮಾಯವಾಯಿತು. ನಮಗೆ ಯುದ್ಧದ ಬಗ್ಗೆ ತಿಳಿದಿರುವಷ್ಟು ಶಾಂತಿಯ ಬಗ್ಗೆ ತಿಳಿದಿಲ್ಲ; ಕೊಲ್ಲುವುದರ ಬಗ್ಗೆ ತಿಳಿದಿರುವಷ್ಟು ಜೀವಿಸುವುದರ ಬಗ್ಗೆ ತಿಳಿದಿಲ್ಲ.
>
> ಜನರಲ್ ಓಮರ್ ಬ್ರಾಡ್ಲೀ

ವಿಷಯಲೋಲುಪನಾಗು, ಕಳ್ಳತನ ಮಾಡು, ಕ್ರೋಧಭರಿತನಾಗಿರು ಎಂದು ಪ್ರಪಂಚದ ಯಾವ ಧರ್ಮವೂ ಹೇಳುವುದಿಲ್ಲ. ಮನುಷ್ಯನನ್ನು ಮಾನುಷ್ ಅಥವಾ ಮನ್-ಹುಷ್ ಎಂದರೆ ಎಚ್ಚೆತ್ತ ಜೀವಿ ಎಂದು ಅರ್ಥೈಸುತ್ತಾರೆ. ಮನಸ್ಸು ಎಚ್ಚೆತ್ತಿರುವುದರಿಂದ ಎಂದರೆ ವಿಚಾರ ಸಾಧ್ಯವಾದ್ದರಿಂದ ವಾಸ್ತವ ಅವಾಸ್ತವಗಳನ್ನು ಗುರುತಿಸ ಬಲ್ಲುದಾಗಿದೆ. ಈ ನಿಷ್ಕರ್ಷೆ ವಿವೇಕಕ್ಕೆ ದಾರಿ ಮಾಡಿಕೊಡುತ್ತದೆ. ಆ ವಿವೇಕದ ಸಾಂದ್ರರೂಪವೇ ಅಂತಃಸಾಕ್ಷಿ. ಈ ಅಂತಃಸಾಕ್ಷಿಯನ್ನು ಆಧಾರವಾಗಿಟ್ಟುಕೊಂಡು ತನ್ನ ವಿಚಾರಗಳಿಗೆ ತಾನು ನ್ಯಾಯ ದೊರಕಿಸಿಕೊಳ್ಳಲು ಮನುಷ್ಯ ಅವ್ಯಾಹತ ಪ್ರಯತ್ನ ಮಾಡುತ್ತಾನೆ.

ಈ ಪ್ರಯತ್ನಗಳಲ್ಲೆಲ್ಲ ಕಾಮ-ಕಾಂಚನ ತ್ಯಾಗದ ಪ್ರಯತ್ನ ಮನುಷ್ಯನಿಗೆ ಬಹಳ ಮುಖ್ಯವೆನಿಸಿದೆ. ಕೇವಲ ವಿಚಾರಗಳಿಂದ ಕಾಮ-ಕಾಂಚನದ ಸ್ತರಗಳನ್ನು ಮುಟ್ಟಲಾಗುವುದಿಲ್ಲ. ವಿಚಾರಗಳಿಂದ, ಚಿಂತನೆಯಿಂದ ತಾಂತ್ರಿಕ ಪ್ರಗತಿ ಸಾಧಿಸಬಹುದು. ಆದರೆ ಮನಸ್ಸಿನ ಆಳದ ಈ ಪ್ರವೃತ್ತಿಗಳ ಮೇಲೆ ನಿಯಂತ್ರಣ ಸಾಧಿಸಬೇಕಾದರೆ ಏಕಾಗ್ರತೆ ಬೇಕು, ಧ್ಯಾನ ಬೇಕು, ಯೋಗ ಬೇಕು. ಪರಮಹಂಸರು ವ್ಯಾಕುಲತೆಯ ಕುರಿತು ಬಹಳ ಹೇಳುತ್ತಾರೆ. ಈ ವ್ಯಾಕುಲತೆ ಹುಟ್ಟಬೇಕಾದರೆ ಒಂದು ವಸ್ತುವಿನ ಮೇಲೆ ಅಪಾರವಾದ ಪ್ರೀತಿ ಮೂಡಬೇಕು. ಕಾಮ ನಮ್ಮ ಅಂತರಾಳದಲ್ಲಿ ಅಡಗಿರುವಂತೆ ಅದಕ್ಕೆ ಪರ್ಯಾಯವಾಗಿ ಪ್ರೀತಿಯೂ ಪ್ರತಿಯೊಬ್ಬರ ಅಂತರ್ಯದ ಆಳದಲ್ಲಿ ಅಡಗಿ ಕುಳಿತಿದೆ. ಹೇಗೆ ಕಾಮ ಕರ್ತೃತ್ವ ಶಕ್ತಿಯ ಮೂಲ ಸೆಲೆಯೋ ಹಾಗೆ ಪ್ರೀತಿಯೂ ಅದ್ಭುತ ಕರ್ತೃತ್ವ ಶಕ್ತಿಯ ಮೂಲ ಸೆಲೆಯಾಗಬಲ್ಲದು. ಕಾಮ ಮತ್ತು ಪ್ರೀತಿಗಳೆರಡೂ ಪ್ರತ್ಯೇಕ ಅಸ್ತಿತ್ವವುಳ್ಳ ಮಾನಸಿಕ ಘಟಕಗಳೋ ಅಥವಾ ಒಂದೇ ಘಟಕದ ಪರ್ಯಾಯ ರೂಪಗಳೋ ಎಂಬ ಪ್ರಶ್ನೆ ಗೌಣ. ಆದರೆ ಕಾಮ ಕರ್ತೃತ್ವ ಶಕ್ತಿಯ ಮೂಲ ಸೆಲೆಯಾಗಿ ಕಾರ್ಯಪ್ರವೃತ್ತವಾದಾಗ ಕಾರ್ಯದ ಪರಿಣಾಮಗಳು ಮತ್ತು ಪ್ರೀತಿ ಕರ್ತೃತ್ವ ಶಕ್ತಿಯ ಮೂಲ ಸೆಲೆಯಾಗಿ ನಿಂತಾಗಿನ ಕಾರ್ಯಗಳ ಪರಿಣಾಮಗಳು ಖಂಡಿತಾ ಬೇರೆ ಬೇರೆ ಎಂಬುದು ಸರ್ವವಿದಿತ. ಕಾಮ-ಹೇಮಗಳ ಪ್ರವೃತ್ತಿಗಳು ನಿಷ್ಕ್ರಿಯಗೊಂಡಾಗ, ಪ್ರೀತಿ ವಿಜೃಂಭಿಸಿದಾಗ ಆ ಶರಣ ಕಾಲಾತೀತನಾಗುತ್ತಾನೆ. ಅವನ ಮನೆಯಲ್ಲಿ ಶ್ವಾನನಾಗಿರಿಸು ಮಹಾದಾನಿ ಕೂಡಲ ಸಂಗಮದೇವ ಎನ್ನುವ ಬಸವಣ್ಣನವರ ಈ ಮಾತಿನಲ್ಲಿ ಕಾಮವನ್ನು ಮೀರಿದ ಪ್ರೀತಿಯ ಧ್ವನಿ ಹೇಗಿದೆ ಎಂಬುದನ್ನು ಕಾಣಬಹುದು.

> ಪ್ರೀತಿಯು ಅತ್ಯಸಾಧ್ಯವಾದ ಬಾಗಿಲನ್ನು ತೆರೆಯಬಲ್ಲುದು; ಜಗತ್ತಿನ ರಹಸ್ಯಗಳೆಲ್ಲದರ ಬಾಗಿಲೇ ಪ್ರೀತಿ...... ಪ್ರೀತಿಯ ಶಕ್ತಿಯಿಂದಲೇ ದ್ರವ್ಯವು ಚೇತನವಾಗಿ ಮಾರ್ಪಡುತ್ತದೆ.
>
> ಸ್ವಾಮಿ ವಿವೇಕಾನಂದ

✳

## ಭಕ್ತನಾದ ಕೊಲೆಗಡುಕ

ಶ್ರೀರಾಮಕೃಷ್ಣರ ಸ್ತ್ರೀ ಭಕ್ತರಲ್ಲಿ ಅಗ್ರಗಣ್ಯಳಾದ 'ಯೋಗಿನ್ ಮಾ'ಳು ದಕ್ಷಿಣೇಶ್ವರಕ್ಕೆ ಪದೇ ಪದೇ ಹೋಗುವುದು ಆಕೆಯ ಅಣ್ಣ ಹಿರಾಲಾಲ್‌ಗೆ ಅಪ್ರಿಯ ವಿಷಯವಾಗಿತ್ತು. ಒಂದು ದಿನ ಶ್ರೀರಾಮಕೃಷ್ಣರು ಯೋಗಿನ್ ಮಾ ಕೋರಿಕೆಯಂತೆ ಅವರ ಮನೆಗೆ ಮೊದಲ ಬಾರಿ ಬರುವವರಿದ್ದರು. ವಿಷಯ ತಿಳಿದ ಹಿರಾಲಾಲ್ ಅವರನ್ನು ಹೆದರಿಸಿ ಓಡಿಸಲು ಮನ್ಮಥನೆಂಬ ಸುಪ್ರಸಿದ್ಧ ಪೈಲ್ವಾನ್ ಹಾಗೂ ಕೊಲೆಗಡುಕನನ್ನು ನಿಯಮಿಸಿದ. ಶ್ರೀರಾಮಕೃಷ್ಣರ ದರ್ಶನ ಹಾಗೂ ನುಡಿಗಳನ್ನು ಕೇಳುತ್ತಲೇ ಮನ್ಮಥನು ಕಣ್ಣೀರುಗರೆಯುತ್ತಾ ಅವರ ಪಾದಕಮಲಗಳಿಗೆ ಎರಗಿ, 'ಹೇ ಭಗವಂತ, ನನ್ನ ತಪ್ಪನ್ನು ಕ್ಷಮಿಸಿ' ಎಂದು ಬೇಡಿದನು. ಅವರು ಆತನನ್ನು ದಕ್ಷಿಣೇಶ್ವರಕ್ಕೆ ಆಮಂತ್ರಿಸಿದರು. ಮೊದಲ ದಿನವೇ ಬಹಳ ಅಕ್ಕರೆಯಿಂದ ಮಾತನಾಡಿಸಿ, ಕಾಳಿಮಂದಿರಕ್ಕೆ ಕರೆದೊಯ್ದರು. ಪ್ರದಕ್ಷಿಣೆ ಹಾಕುತ್ತಿರುವಾಗ ಒಂದು ಮೂಲೆಯಲ್ಲಿ ಆತನನ್ನು ಆಶೀರ್ವದಿಸಿದರು ಹಾಗೂ ಮುಂದಿನ ಭಾನುವಾರ ಬರಲು ಆಹ್ವಾನವಿತ್ತರು.

ಸ್ವಾಮಿ ಅಖಂಡಾನಂದರು ಅನೇಕ ವರ್ಷಗಳ ತರುವಾಯ ಆತನನ್ನು ಸಂಧಿಸಿದಾಗ ದಿಗ್ಭ್ರಾಂತರಾದರು. ಆತನ ಶರೀರತಪಸ್ಸಿನಿಂದ ಕೃಶವಾಗಿ ಹೋಗಿತ್ತು. ಬಾಹ್ಯಪ್ರಜ್ಞೆಯೇ ಇರಲಿಲ್ಲ. ದೇವರ ಹುಚ್ಚು ಹಿಡಿದ ಆ ಸ್ಥಿತಿಯು ಬಹಳ ಮನೋಜ್ಞವಾಗಿತ್ತು. 'ಶ್ರೀರಾಮಕೃಷ್ಣರ ಸಂಗಮಹಿಮೆಯು ಅದ್ಭುತ ಎಂದು ಅರಿತೆ. ಗಿರಿಗುಹೆಗಳಲ್ಲಿ, ಬೆಟ್ಟಗಾಡುಗಳಲ್ಲಿ ತಪಸ್ಸಿನಿಂದಲೂ ಪಡೆಯಲಾರದ್ದನ್ನು ಕೇವಲ ಅವರ ಕೃಪೆಯಿಂದ ಸುಲಭವಾಗಿ ಮನೆಯಲ್ಲೇ ಪಡೆಯಬಹುದು ಎಂಬ ಸತ್ಯವನ್ನು ಅರಿತೆ' ಎನ್ನುತ್ತಾರೆ ಸ್ವಾಮಿ ಅಖಂಡಾನಂದರು. ◆